(3)

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	565
ಸದಸ್ಯರ ಹೆಸರು	:	ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ	:	14.02.2019
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದ ಕರಾವಳಿ ತೀರವನ್ನು ಸಮುದ್ರ ಕೊರೆತದಿಂದ ಸಂರಕ್ಷಿಸಿ ಸಾರ್ವಜನಿಕರ ಆಸ್ತಿಪಾಸ್ತಿಗೆ ಹಾನಿಯನ್ನು ತಡೆಗಟ್ಟುವ ಸಲುವಾಗಿ ಸರ್ಕಾರವು ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು;	ರಾಜ್ಯದ ಕರಾವಳಿ ತೀರವನ್ನು ಸಮುದ್ರ ಕೊರೆತದಿಂದ ಸಂರಕ್ಷಿಸಲು ಸರ್ಕಾರವು "ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್" ನೆರವಿನಡಿಯಲ್ಲಿ ರೂ.911.00 ಕೋಟಿ ಮೊತ್ತದ ಕರಾವಳಿ ಸಂರಕ್ಷಣೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಅಲ್ಲದೇ ರಾಜ್ಯ ಸರ್ಕಾರದ ವಾರ್ಷಿಕ ಅನುದಾನದಲ್ಲಿ ತೀವ್ರ ಸಮುದ್ರ ಕೊರೆತವಿರುವ ಪ್ರದೇಶಗಳನ್ನು ಗುರುತಿಸಿ, CWPRS, Pune ಮತ್ತು KERS, K.R. Sagar, ತಜ್ಞ ಸಂಸ್ಥೆಗಳಿಂದ ಸ್ಥಳಕ್ಕೆ ಸೂಕ್ತ ವಿನ್ಯಾಸವನ್ನು ಪಡೆದು ಸಮುದ್ರ ಕೊರೆತ ತಡೆಗೋಡೆ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆ.
ಆ)	ಈವರೆಗೆ ಎಷ್ಟು ಉದ್ದದ ಕರಾವಳಿ ತೀರವನ್ನು ಸಮುದ್ರ ಕೊರೆತದಿಂದ ಸಂರಕ್ಷಿಸಲಾಗಿರುತ್ತದೆ;	ಎಡಿಬಿ ಟ್ರಾಂಚ್-1 ರಡಿಯಲ್ಲಿ ಒಟ್ಟು 3.50 ಕಿ.ಮೀ. ಉದ್ದದ ಕರಾವಳಿ ತೀರವನ್ನು ಸಂರಕ್ಷಿಸಲಾಗಿದೆ. ಟ್ರಾಂಚ್-2 ರಲ್ಲಿ ಒಟ್ಟು 9 ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು, ಒಟ್ಟು 42.99 ಕಿ.ಮೀ. ಉದ್ದದ ಕರಾವಳಿ ತೀರವನ್ನು ಸಂರಕ್ಷಿಸಲು ಉದ್ದೇಶಿಸಲಾಗಿದೆ. ರಾಜ್ಯ ಸರ್ಕಾರದ ವಾರ್ಷಿಕ ಅನುದಾನದಲ್ಲಿ ಒಟ್ಟು 65.43 ಕಿ.ಮೀ. ಉದ್ದದ ಶಾಶ್ವತ ಸಮುದ್ರ ಕೊರೆತ ತಡೆಗೋಡೆ ಮತ್ತು 16.72 ಕಿ.ಮೀ. ಉದ್ದದ ತುರ್ತು ಸಮುದ್ರ ಕೊರೆತ ತಡೆಗೋಡೆ ನಿರ್ಮಿಸಲಾಗಿದೆ.
ಇ)	ಏಶಿಯನ್ ಡೆವಲಪ್‌ಮೆಂಟ್ ಬ್ಯಾಂಕ್ (ಎಡಿಬಿ) ನೆರವಿನಡಿಯಲ್ಲಿ ಕೈಗೆತ್ತಿಕೊಂಡಿರುವ ಯೋಜನೆಗಳು ಮತ್ತು ಪ್ರಸ್ತುತ ಪ್ರಗತಿಯ ವಿವರಗಳನ್ನು ನೀಡುವುದು;	"ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್" ನೆರವಿನ ಟ್ರಾಂಚ್-1 ರಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ಪ್ರದೇಶದಲ್ಲಿ ರೂ. 204.55 ಕೋಟಿ ವೆಚ್ಚದಲ್ಲಿ ಇನ್‌ಶೋರ್ ಬರ್ಮ್, ಆಫ್‌ಶೋರ್ ರೀಫ್ ಮತ್ತು ಬ್ರೇಕ್‌ವಾಟರ್‌ಗಳ ಪುನರ್ ನಿರ್ಮಾಣ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು, ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಿದೆ. ಟ್ರಾಂಚ್-2 ಯೋಜನೆಯಡಿಯಲ್ಲಿ ಒಟ್ಟು 9 ಕಾಮಗಾರಿಗಳನ್ನು ರೂ.514.80 ಕೋಟಿ ಮೊತ್ತದಲ್ಲಿ ಕೈಗೊಳ್ಳಲು ಉದ್ದೇಶಿಸಿದ್ದು, ಇವುಗಳಲ್ಲಿ 5 ಕಾಮಗಾರಿಗಳು ಪ್ರಗತಿಯಲ್ಲಿದ್ದು, 3 ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿದೆ ಹಾಗೂ ಒಂದು ಕಾಮಗಾರಿಯ ಡಿಪಿಆರ್‌ನ್ನು ಎಡಿಬಿ ಅನುಮೋದನೆಗೆ ಸಲ್ಲಿಸಿದ್ದು, ಪ್ರಗತಿಯ ವಿರವಗಳನ್ನು **ಅನುಬಂಧ-2** ರಲ್ಲಿ ಒದಗಿಸಿದೆ.
ಈ)	ಮುಂದಿನ ಹಂತಗಳಲ್ಲಿ ಏಶಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ನೆರವಿನ ಕರಾವಳಿ ತೀರ ಸಂರಕ್ಷಣಾ ಯೋಜನೆಯನ್ನು ಕರಾವಳಿಯ ಉಳಿದ ಪ್ರದೇಶಗಳಿಗೆ ವಿಸ್ತರಿಸಿ ಸಮುದ್ರ ಕೊರೆತದಿಂದ ಸಂರಕ್ಷಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?	ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ ನೆರವಿನಿಂದ ಹಮ್ಮಿಕೊಳ್ಳಲಾದ ಕರಾವಳಿ ತೀರ ಸಂರಕ್ಷಣಾ ಯೋಜನೆಯು ಪೂರ್ಣಗೊಂಡ ನಂತರ, ಈ ಯೋಜನೆಯಿಂದ ಉಂಟಾಗುವ ಕಡಲ ಸಂರಕ್ಷಣೆಯನ್ನು ಪರಾಮರ್ಶಿಸಿ, ಉಳಿದ ಪ್ರದೇಶಗಳಿಗೆ ವಿಸ್ತರಿಸುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು.

ಸಂಖ್ಯೆ: ಲೋಇ 30 ಪಿಎಸ್‌ಪಿ 2019

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

<u>ಅನುಬಂಧ-1</u>

<u>ಯೋಜನಾ ನಿರ್ವಹಣಾ ಘಟಕ, ಸುಸ್ಥಿರ ಕರಾವಳಿ ತೀರ ಸಂರಕ್ಷಣೆ ಹಾಗೂ ನಿರ್ವಹಣಾ ಯೋಜನೆ ಅಡಿಯ</u>

<u>ಟ್ರಾಂಚ್- 1 ಕಾಮಗಾರಿಗಳ ವಿವರ</u>

(ರೂ. ಕೋಟಿಗಳಲ್ಲಿ)

ಕ್ರ ಸಂ	ಕಾಮಗಾರಿಯ ವಿವರ	ಜಿಲ್ಲೆ/ ತಾಲೂಕು	ವಿಧಾನ ಸಭಾ ಕ್ಷೇತ್ರ	ಮಂಜೂರಾದ ಮೂಲ ಅಂದಾಜು ಮೊತ್ತ	ಗುತ್ತಿಗೆ ಕರಾರು ಮೊತ್ತ	ಪರಿಷ್ಕೃತ ಗುತ್ತಿಗೆ ಮೊತ್ತ	ಗುತ್ತಿಗೆದಾರರ ಹೆಸರು	ಗುತ್ತಿಗೆ ಕರಾರು ಪ್ರಕಾರ ಕಾಮಗಾರಿ ಪ್ರಾರಂಭವಾದ ದಿನಾಂಕ	ಗುತ್ತಿಗೆ ಕರಾರು ಪ್ರಕಾರ ಕಾಮಗಾರಿ ಪೂರ್ಣಗೊಳ್ಳುವ ದಿನಾಂಕ	ಕಾಮಗಾರಿ ಪೂರ್ಣಗೊಳ್ಳುವ ಪರಿಷ್ಕೃತ ದಿನಾಂಕ	ಕಾಮಗಾರಿ ಪೂರ್ಣಗೊಂಡ ದಿನಾಂಕ	ಇಲ್ಲಿಯವರೆಗಿನ ಒಟ್ಟು ವೆಚ್ಚ (ಜನವರಿ 2019 ರ ಅಂತ್ಯಕ್ಕೆ)	ಪ್ರಗತಿ ವಿವರ
1.	ಉಳ್ಳಾಲದಲ್ಲಿ ಇನ್‌ಶೋರ್ ಬರ್ಮುಗಳ ನಿರ್ಮಾಣ	ದಕ್ಷಿಣ ಕನ್ನಡ/ ಮಂಗಳೂರು	ಮಂಗಳೂರು	26.25	25.51	38.60	ಮೆ॥ ಆರ್.ಡಿ.ಎಸ್. ಪ್ರಾಜೆಕ್ಟ್ಸ್ ಲಿ.ಕೊಚ್ಚಿನ್	3.12.13	02.08.15	30.06.18	30.06.18	38.60	ಉಳ್ಳಾಲದಲ್ಲಿ 8 ಇನ್‌ಶೋರ್ ಬರ್ಮುಗಳ ನಿರ್ಮಾಣ ಮತ್ತು 245ಮೀ ಉದ್ದದ ನದಿದಂಡೆ ರಿವೆಟ್‌ಮೆಂಟ್ <u>ಕಾಮಗಾರಿಯು ಮುಕ್ತಾಯಗೊಂಡಿರುತ್ತದೆ.</u>
2.	ಉಳ್ಳಾಲದಲ್ಲಿ ಬ್ರೇಕ್ ವಾಟರ್‌ಗಳ ಪುನರ್ ನಿರ್ಮಾಣ	ದಕ್ಷಿಣ ಕನ್ನಡ/ ಮಂಗಳೂರು	ಮಂಗಳೂರು, ಮಂಗಳೂರು ದಕ್ಷಿಣ	46.40	40.91	58.32	ಮೆ॥ ಆರ್.ಬಿ. ಚವಾಣ್ – ಅರ್ಜುನ್ ಅರ್ಥ್ ಮೂವರ್ಸ್ (ಜೆ.ವಿ.) ಮುಂಬಾಯಿ	1.12.14	31.07.16	30.05.17	30.05.17	58.32	ಈ ಕಾಮಗಾರಿಯಲ್ಲಿ ಈ ಹಿಂದೆ ನಿರ್ಮಿಸಲಾಗಿದ್ದ ಶಿಥಿಲಗೊಂಡಿರುವ ಉತ್ತರ ಮತ್ತು ದಕ್ಷಿಣ ಬ್ರೇಕ್‌ವಾಟರ್‌ನ ಸದೃಢಗೊಳಿಸುವುದು ಹಾಗೂ ದಕ್ಷಿಣ ಬ್ರೇಕ್‌ವಾಟರ್‌ನ tail end ನ್ನು ವಿಸ್ತರಿಸುವ <u>ಕಾಮಗಾರಿಯು ಮುಕ್ತಾಯಗೊಂಡಿರುತ್ತದೆ.</u>
3.	ಉಳ್ಳಾಲದಲ್ಲಿ 2 ಆಫ್‌ಶೋರ್ ರೀಫ್‌ಗಳ ನಿರ್ಮಾಣ	ದಕ್ಷಿಣ ಕನ್ನಡ/ ಮಂಗಳೂರು	ಮಂಗಳೂರು	88.00	110.00	110.00	ಮೆ॥ ಧರ್ತಿ ಡ್ರೆಡ್ಜಿಂಗ್ ಮತ್ತು ಇನ್‌ಫ್ರಾಸ್ಟ್ರಕ್ಚರ್ ಲಿ. ಹೈದ್ರಾಬಾದ್	1.12.14	31.07.16	26.05.17	26.05.17	107.63	ಈ ಕಾಮಗಾರಿಯಲ್ಲಿ ದಕ್ಷಿಣ ಮತ್ತು ಉತ್ತರದ 2 ಆಫ್‌ಶೋರ್ ರೀಫ್‌ಗಳಿದ್ದು, ಕ್ರಮವಾಗಿ 390ಮೀ ಮತ್ತು 315ಮೀ ಉದ್ದವಿದ್ದು, ಇವುಗಳನ್ನು ಕ್ರಮವಾಗಿ ಸಮುದ್ರ ತೀರದಿಂದ 700 ಮೀಟರ್ ಮತ್ತು 600 ಮೀಟರ್ ಅಂತರದಲ್ಲಿ ನಿರ್ಮಾಣ ಮಾಡಲಾಗಿದೆ. <u>ಕಾಮಗಾರಿಯು ಮುಕ್ತಾಯಗೊಂಡಿರುತ್ತದೆ.</u>

ನಿರ್ದೇಶಕರು
ಬಂದರು ಮತ್ತು ಒಳನಾಡು ಜಲಸಾರಿಗೆ
ಇಲಾಖೆ ಕಾರವಾರ.

ಅನುಬಂಧ-2

ಯೋಜನಾ ನಿರ್ವಹಣಾ ಘಟಕ, ಸುಸ್ಥಿರ ಕರಾವಳಿ ತೀರ ಸಂರಕ್ಷಣೆ ಹಾಗೂ ನಿರ್ವಹಣಾ ಯೋಜನೆ ಅಡಿಯ ಟ್ರಾಂಚ್ -2 ಕಾಮಗಾರಿಗಳ ವಿವರ

(ರೂ. ಕೋಟಿಗಳಲ್ಲಿ)

ಕ್ರ ಸಂ	ಕಾಮಗಾರಿಯ ವಿವರ	ಜಿಲ್ಲೆ/ ತಾಲೂಕು	ವಿಧಾನ ಸಭಾ ಕ್ಷೇತ್ರ	ಮಂಜೂರಾದ ಮೂಲ ಅಂದಾಜು ಮೊತ್ತ	ಗುತ್ತಿಗೆ ಕರಾರು ಮೊತ್ತ	ಪರಿಷ್ಕೃತ ಗುತ್ತಿಗೆ ಮೊತ್ತ	ಗುತ್ತಿಗೆದಾರರ ಹೆಸರು	ಗುತ್ತಿಗೆ ಕರಾರು ಪ್ರಕಾರ ಕಾಮಗಾರಿ ಪ್ರಾರಂಭವಾದ ದಿನಾಂಕ	ಗುತ್ತಿಗೆ ಕರಾರು ಪ್ರಕಾರ ಕಾಮಗಾರಿ ಪೂರ್ಣಗೊಳ್ಳುವ ದಿನಾಂಕ	ಕಾಮಗಾರಿ ಪೂರ್ಣಗೊಳ್ಳುವ ಪರಿಷ್ಕೃತ ದಿನಾಂಕ	ಇಲ್ಲಿಯವರೆಗಿನ ಒಟ್ಟು ವೆಚ್ಚ (ಜನವರಿ 2019 ರ ಅಂತ್ಯಕ್ಕೆ)	ಪ್ರಗತಿ ವಿವರ
1	2	3	4	5	6	7	8	9	10	11	12	13
	ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರ											
1.	ಉದ್ಯಾವರ ಕಡಲತೀರ ಸಂರಕ್ಷಣೆ ಮತ್ತು ತೀರಗೋಡೆಗಳ ನಿರ್ಮಾಣ ಹಾಗೂ ಮರಳು ಪೋಷಣೆ	ಉಡುಪಿ / ಉಡುಪಿ	ಕಾಪು	99.85	78.44	91.09	ಮೇ॥ ಯೋಜಕಾ-ಕೋಮಕೋ-ಆರ್.ಡಿ.ಎಸ್ (ಜೆವಿ)	24.03.17	13.12.18	14.05.19	45.14	ಉದ್ಯಾವರ ಕಾಮಗಾರಿಯಲ್ಲಿ ಒಟ್ಟು 35 ಗ್ರಾಯನ್‌ಗಳ ನಿರ್ಮಾಣ ಮಾಡಬೇಕಾಗಿದ್ದು, 27 ಗ್ರಾಯನ್‌ಗಳ ನಿರ್ಮಾಣ ಪೂರ್ಣಗೊಂಡಿದ್ದು, 5 ಗ್ರಾಯನ್‌ಗಳು ಪ್ರಗತಿಯಲ್ಲಿದೆ. ಗುತ್ತಿಗೆ ಅವಧಿಯನ್ನು 14-05-2019 ರವರೆಗೆ ವಿಸ್ತರಿಸಲಾಗಿದೆ.
2.	ಮರವಂತೆ ಕರಾವಳಿ ತೀರ ಸಂರಕ್ಷಣೆ ಹಾಗೂ ನಿರ್ವಹಣೆಗಾಗಿ ತೀರಗೋಡೆ ರಚನೆ ಮತ್ತು ಮರಳು ಪುನರ್ವಿತರಣೆ	ಉಡುಪಿ / ಕುಂದಾಪುರ	ಬೈಂದೂರು	92.23	88.27	-	ಮೇ॥ ಕೋಮಕೋ-ಆರ್.ಡಿ.ಎಸ್-ಯೋಜಕಾ- (ಜೆವಿ)	04.03.17	03.12.18	15.04.19	32.80	ಮರವಂತೆ ಕಾಮಗಾರಿಯಲ್ಲಿ 15 'ಐ' ಗ್ರಾಯನ್‌ಗಳು ಹಾಗೂ 9 'ಟಿ' ಗ್ರಾಯನ್‌ಗಳು ಒಟ್ಟು 24 ಗ್ರಾಯನ್‌ಗಳನ್ನು ನಿರ್ಮಿಸಬೇಕಾಗಿದ್ದು, 15 'ಐ' ಗ್ರಾಯನ್‌ಗಳ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದು, 7 'ಟಿ' ಗ್ರಾಯನ್‌ಗಳ ನಿರ್ಮಾಣ ಹಾಗೂ ಟೆಟ್ರಾಪಾಡ್‌ಗಳ ತಯಾರಿ ಕಾಮಗಾರಿಗಳು ಪ್ರಗತಿಯಲ್ಲಿದೆ. ಗುತ್ತಿಗೆ ಅವಧಿಯನ್ನು 15-04-2019 ರವರೆಗೆ ವಿಸ್ತರಿಸಲಾಗಿದೆ.
3.	ಕೋಡಿಬೆಂಗ್ರೆ ಕಡಲತೀರ ಸಂರಕ್ಷಣೆ ಮತ್ತು ಬಂಡೆಕಲ್ಲು ಕಡಗೋಡೆಗಳ ನಿರ್ಮಾಣ	ಉಡುಪಿ / ಉಡುಪಿ	ಉಡುಪಿ	75.88	61.39	72.65	ಮೇ॥ ಆರ್‌ಸಿಸಿಎಲ್-ಡಿಬಿಐಎಲ್-(ಜೆವಿ)	28.12.17	19.08.19	19.08.19	59.62	ಕೋಡಿ ಬೆಂಗ್ರೆ ಕಾಮಗಾರಿಯಲ್ಲಿ ಒಟ್ಟು 4100ಮೀ ಕಡಗೋಡೆಗಳ ನಿರ್ಮಾಣ ಮಾಡಬೇಕಾಗಿದ್ದು, 2250ಮೀ ಕಾಮಗಾರಿ ಪೂರ್ಣಗೊಂಡಿದ್ದು, 1350 ಮೀ ಕಾಮಗಾರಿ ಪ್ರಗತಿಯಲ್ಲಿದೆ.
4.	ಸೋಮೇಶ್ವರ ಕರಾವಳಿ ತೀರ ಸಂರಕ್ಷಣೆ ಹಾಗೂ ನಿರ್ವಹಣೆಗಾಗಿ ಜಿಯೋಟೆಕ್ಸ್‌ಟೈಲ್ ರಿವೆಟ್‌ಮೆಂಟ್ ನಿರ್ಮಾಣ	ದಕ್ಷಿಣ ಕನ್ನಡ/ ಮಂಗಳೂರು	ಮಂಗಳೂರು	32.15	27.29	26.33	ಮೇ॥ ಧರ್ತಿ ಡ್ರೆಡ್ಜಿಂಗ್ ಮತ್ತು ಇನ್‌ಫ್ರಾಸ್ಟ್ರಕ್ಚರ್ ಲಿ. ಹೈದ್ರಾಬಾದ್	07.12.18	06.08.20	-	4.71	ಸೋಮೇಶ್ವರ ಕಾಮಗಾರಿಗೆ M/s. Dharti Dredging and Infrastructure Limited ಇವರೊಂದಿಗೆ ಗುತ್ತಿಗೆ ಕರಾರು ಒಪ್ಪಂದ ನಿರ್ವಹಿಸಲಾಗಿದ್ದು, ಬದಲಾದ ವಿನ್ಯಾಸದಂತೆ ಕಾಮಗಾರಿ ಪ್ರಾರಂಭಿಸಲಾಗಿದೆ.
5.	ಕೋಡಿಕನ್ಯಾನದಲ್ಲಿ ಗಿಡನೆಡುವ ಹಾಗೂ ಸಮುದಾಯ ಜಾಗೃತಿ ಮತ್ತು ತರಬೇತಿಗಳು	ಉಡುಪಿ / ಕುಂದಾಪುರ	ಕುಂದಾಪುರ	0.97	0.96	-	ಶ್ರೀ ಅನ್ನಪೂರ್ಣೇಶ್ವರಿ ನರ್ಸರಿ ಮತ್ತು ಫಾರ್ಮ್	01.12.18	31.07.20	31.07.20	0.17	ಕೋಡಿ ಕನ್ಯಾನ ಕಾಮಗಾರಿಗೆ ದಿನಾಂಕ 03-11-2018 ರಂದು ಗುತ್ತಿಗೆ ಕರಾರು ಮಾಡಲಾಗಿದ್ದು, ಕಾಮಗಾರಿ ಪ್ರಾರಂಭಿಸಲಾಗಿದೆ.
	ಒಟ್ಟು			301.08	256.35						142.44	

ಕ್ರ ಸಂ	ಕಾಮಗಾರಿಯ ವಿವರ	ಜಿಲ್ಲೆ/ ತಾಲೂಕು	ವಿಧಾನ ಸಭಾ ಕ್ಷೇತ್ರ	ಮಂಜೂರಾದ ಮೂಲ ಅಂದಾಜು ಮೊತ್ತ	ಗುತ್ತಿಗೆ ಕರಾರು ಮೊತ್ತ	ಪರಿಷ್ಕೃತ ಗುತ್ತಿಗೆ ಮೊತ್ತ	ಗುತ್ತಿಗೆದಾರರ ಹೆಸರು	ಗುತ್ತಿಗೆ ಕರಾರು ಪ್ರಕಾರ ಕಾಮಗಾರಿ ಪ್ರಾರಂಭವಾದ ದಿನಾಂಕ	ಗುತ್ತಿಗೆ ಕರಾರು ಪ್ರಕಾರ ಕಾಮಗಾರಿ ಪೂರ್ಣಗೊಳ್ಳುವ ದಿನಾಂಕ	ಕಾಮಗಾರಿ ಪೂರ್ಣಗೊಳ್ಳುವ ಪರಿಷ್ಕೃತ ದಿನಾಂಕ	ಇಲ್ಲಿಯವರೆಗಿನ ಒಟ್ಟು ವೆಚ್ಚ (ಜನವರಿ 2019 ರ ಅಂತ್ಯಕ್ಕೆ)	ಪ್ರಗತಿ ವಿವರ
1	2	3	4	5	6	7	8	9	10	11	12	13
	ಕೈಗೆತ್ತಿಕೊಳ್ಳಬೇಕಾಗಿರುವ ಕಾಮಗಾರಿಗಳ ವಿವರ											
6.	ಎರ್ಮಾಲ್ ಶಂಕ ಕಡಲತೀರ ಸಂರಕ್ಷಣೆ ಹಾಗೂ ನಿರ್ವಹಣೆಗಾಗಿ ಬಂಡೆಕಲ್ಲುಗಳ ಕಡೆಗೋಡೆಗಳ ನಿರ್ಮಾಣ	ಉಡುಪಿ / ಉಡುಪಿ	ಕಾಪು	53.22	-	-					-	ಕಾಮಗಾರಿಯನ್ನು ಮರು ಟೆಂಡರ್ ಕರೆಯಲಾಗಿದ್ದು, ತಾಂತ್ರಿಕ ಬಿಡ್ ಪರಶೀಲನ ವರದಿಯನ್ನು ADB ಗೆ ಕಳುಹಿಸಲಾಗಿದೆ.
7.	ಸಮುದಾಯ ಉಪಯೋಜನಾ ಕಾಮಗಾರಿ-A	ಉತ್ತರ ಕನ್ನಡ		10.55	-	-		-	-	-	-	ಟೆಂಡರ್ ಕರೆಯಲಾಗಿದ್ದು ಸ್ವೀಕೃತಿ ದಿನಾಂಕ 21-02-2019
	ಸಮುದಾಯ ಉಪಯೋಜನಾ ಕಾಮಗಾರಿ-B	ಉತ್ತರ ಕನ್ನಡ		20.96	-	-		-	-	-	-	ಟೆಂಡರ್ ಕರೆಯಲಾಗಿದ್ದು ಸ್ವೀಕೃತಿ ದಿನಾಂಕ 22-02-2019
8.	ಸೋಮೇಶ್ವರ ಕರಾವಳಿ ತೀರ ಸಂರಕ್ಷಣೆ ಹಾಗೂ ನಿರ್ವಹಣೆಗಾಗಿ 2 ಆಫ್‌ಶೋರ್ ರೀಫ್‌ಗಳ ನಿರ್ಮಾಣ ಹಾಗೂ ಮರಳು ಪೋಷಣೆ	ದಕ್ಷಿಣ ಕನ್ನಡ/ ಮಂಗಳೂರು	ಮಂಗಳೂರು	108.80				-	-	-	-	ಟೆಂಡರ್‌ನ ತಾಂತ್ರಿಕ ಬಿಡ್ ಪರಿಶೀಲನೆಯಲ್ಲಿದೆ.
9.	ಮುಕ್ಕಚೇರಿ ಕರಾವಳಿ ತೀರ ಸಂರಕ್ಷಣಾ ಕಾಮಗಾರಿ	ದಕ್ಷಿಣ ಕನ್ನಡ/ ಮಂಗಳೂರು	ಮಂಗಳೂರು	20.19				-	-	-	-	ವಿಸ್ತೃತ ಯೋಜನಾ ವರದಿ(DPR)ಯನ್ನು ADBಗೆ ಅಭಿಪ್ರಾಯ ಕೋರಿ ಸಲ್ಲಿಸಿದೆ.
	ಒಟ್ಟು			213.72								

ನಿರ್ದೇಶಕರು
ಬಂದರು ಮತ್ತು ಒಳನಾಡು ಜಲಸಾರಿಗೆ
ಇಲಾಖೆ ಕಾರವಾರ.